ಉಪಾಧ್ಯಕ್ಷರು : ಸಭಾಪತಿಯವರೇ ನೀವು ಮಾನ್ಯ ಮಂತ್ರಿಗಳ ಹತ್ತಿರ ಹೋಗಿ ಎಲ್ಲಾ ವಿವರಗಳನ್ನು ಕೊಟ್ಟು ಮಾತಾನಾಡಿ...

ಶ್ರೀ ಯು.ಆರ್ ಸಭಾಪತಿ : ಈ ರೀತಿ ಉತ್ತರ ಕೊಡುವುದಕ್ಕೆ ತಾವು ಅನುಮತಿ ಕೊಡಬಾರದು, ನೇರವಾಗಿ ನನ್ನ ಪ್ರಶ್ನೆಗೆ ಉತ್ತರ ಕೊಡಿಸಬೇಕು.

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ : ರಂಗಸ್ವಾಮಿಯವರನ್ನು ಯಾವ ರೀತಿ ಮಾಡಿದ್ದೇವೆ ಎನ್ನುವುದಕ್ಕೆ ಇಲ್ಲಿ ಕಡತವಿದೆ. ಕಾರ್ಯದರ್ಶಿಯವರ ಮೂಲಕ ಈ ಕಡತ ಬಂದ ಮೇಲೆ ನಾನು ಆರ್ಡರ್ ಮಾಡಿರುವುದೇ ವಿನಾಃ ನಾನೇನು ಇದರ ಬಗ್ಗೆ ಮುತುವರ್ಜಿವಹಿಸಿ ಮಾಡಿಲ್ಲ.

ಶ್ರೀ ಮತಿ ಬಿ.ಟಿ. ಲಲಿತಾ ನಾಯಕ್ : ಇಷ್ಟೊಂದು ಅನ್ಯಾಯ. ಹಗರಣ, ಆಗಿರುವಾಗ ಒಂದು ವೇಳೆ ದೇವರು ಏನಾದರೂ ಇದ್ದರೆ, ಜಗಜ್ಯೋತಿ ಬಸವಣ್ಣನವರ ವಚನದಂತೆ, ''ನನ್ನನ್ನು ಕಿವುಡ ಹಾಗೂ ಕುರುಡನಾಗಿ ಮಾಡಯ್ಯ'' ಎಂದು ಹೇಳುತ್ತಿದ್ದೆ. ಇದು ನಮ್ಮಲ್ಲೂ ಕೂಡ ನಡೆಯುತ್ತಿದೆ. ಮಾನ್ಯ ಸಚಿವರು ಎಷ್ಟು ಅವ್ಯವಹಾರ ನಡೆಯುತ್ತಿದೆ ಎಂಬುದು ಮಾನ್ಯ ಸಭಾಪತಿಯವರಿಗೆ ಗೊತ್ತಿಲ್ಲ ಎಂದು ಹೇಳಿದರು, ಬಹುಶಃ ಮಾನ್ಯ ಮಂತ್ರಿಗಳಿಗೆ ಈ ಇಲಾಖೆಯಲ್ಲಿ ಎಷ್ಟೊಂದು ಅನ್ಯಾಯ ನಡೆಯುತ್ತಿದೆ ಎಂದು ಗೊತ್ತಿಲ್ಲ.

ಶ್ರೀ ಕೆ. ಪ್ರತಾಪ್ ಚಂದ್ರ ಶೆಟ್ಟಿ : ಈ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರು ಉತ್ತರ ಕೊಡಲೇಬೇಕಾಗುತ್ತದೆ. ಇಲ್ಲದಿದ್ದರೆ ಅವರ ಮೇಲೆ ಆಪಾದನೆ ಬರುತ್ತದೆ.

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ : ಮಾನ್ಯ ಸದಸ್ಯರಾದ ಸಭಾಪತಿಯವರು ನನ್ನ ಹತ್ತಿರ ಬಂದು ನಾನು, ಎಲ್ಲಿ ತಪ್ಪು ಮಾಡಿದ್ದೇನೆ ಎಂಬುದನ್ನು ಸೂಚಿಸಿದರೆ ನಾನು ಒಂದು ನಿಮಿಷ ಕೂಡ ಮಂತ್ರಿ ಪದವಿಯಲ್ಲಿ ಇರುವುದಕ್ಕೆ ಇಷ್ಟಪಡುವುದಿಲ್ಲವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

(ಗ) ಬಾದಾಮಿಯಲ್ಲಿ ಪಟ್ಟದಕಲ್ಲು ರಥೋತ್ಸವ

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ): ಮಾನ್ಯ ಉಪಾಧ್ಯಕ್ಷರೆ, ನಮ್ಮ ಬಾದಾಮಿ ಐತಿಹಾಸಿಕ ಸ್ಥಳವಾಗಿದೆ. ಇಲ್ಲಿಪಟ್ಟದಕಲ್ಲು ರಥೋತ್ಸವನ್ನು ಸುಮಾರು 9 ವರ್ಷಗಳಿಂದ ನೆರವೇರಿಸಿಕೊಂಡು ಬಂದಿದ್ದೇವೆ. ಈಗ ಇದ್ದಕಿದ್ದ ಹಾಗೆ ನಿಲ್ಲಿಸಿ ಬಿಟ್ಟಿದ್ದಾರೆ. ಇದನ್ನು ನಿಲ್ಲಿಸುವುದಕ್ಕೆ ಕಾರಣ ಏನೆಂದು ಅಧಿಕಾರಿಗಳನ್ನು ಕೇಳಿದರೆ ಅವರಿಂದ ಸರಿಯಾದ ಉತ್ತರ ಬರುತ್ತಿಲ್ಲ. ಇದನ್ನು ಮಾಡುವುದಕ್ಕಾಗುವುದಿಲ್ಲ ಎಂಬ ನಿರುತ್ತರ ಅವರಿಂದ ಬರುತ್ತಿದೆ. ಅಡೀ ರಾಷ್ಟ್ರದಾದ್ಯಂತದಿಂದ ಬರುವ ಕಲಾವಿದರಿಂದ ಬಹಳ ಅತ್ಯುತ್ತಮವಾಗಿ ಮತ್ತು ವಿಜೃಂಭಣೆಯಿಂದ ಸರ್ಕಾರದ ವತಿಯಿಂದ ನಡೆಯುವ ಈ ಕಾರ್ಯಕ್ರಮ ನಿಲ್ಲಬಾರದು. ಈ ವರ್ಷದಿಂದಲೇ ಈ ಕಾರ್ಯಕ್ರಮ ಮತ್ತೆ ಪ್ರಾರಂಭ ಮಾಡುವುದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು ಮನಸ್ಸು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಬಾದಾಮಿಯ ಐಹೊಳೆಯಲ್ಲಿ ಪಟ್ಟದಕಲ್ಲು ಉತ್ಸವ ಪ್ರತಿ ವರ್ಷ ನಡೆಯುತ್ತಿತ್ತು. ಆದರೆ, ಈ ವರ್ಷ ನಿಲ್ಲಿಸಿರುವುದಕ್ಕೆ ಕಾರಣ ಏನು? ಮತ್ತೆ ಉತ್ಸವವನ್ನು ಮಾಡಬೇಕೆಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ.

ಶ್ರೀ ಜೆ.ಹೆಚ್. ಪಟೇಲ್(ಮುಖ್ಯಮಂತ್ರಿಗಳು) : ಉತ್ಸವ ನಿಲ್ಲುವುದಕ್ಕೆ ಕಾರಣ ಏನೆಂಬುದು ತಿಳಿದುಕೊಳ್ಳುತ್ತೇನೆ. ಅದು ಸಕಾರಣ ಅಲ್ಲದಿದ್ದರೆ ಮತ್ತೆ ಉತ್ಸವವನ್ನು ಮಾಡೋಣ.

(ಘ) ದಿನಗೂಲಿ ನೌಕರರನ್ನು ಖಾಯಂ ಮಾಡುವುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಸನ್ಮಾನ್ಯ ಉಪಾಧ್ಯಕ್ಷರೆ, ತಾವು ಆಗಲೆ ನನ್ನನು ಕರೆದಂಥ ಸಂದರ್ಭದಲ್ಲಿ ನಾನು ಎ.ಪಿ.ಎಂ.ಸಿ. ಮಂತ್ರಿಗಳು ಕರೆದಿದ್ದ ಸಭೆಗೆ ಹೋಗಿದ್ದೆ. ಎರಡು ದಿವಸದಿಂದ ದಿನಗೂಲಿ ನೌಕರರು ವಿಧಾನಸೌಧವನ್ನು ಮುತ್ತಿಗೆ ಹಾಕುವಂತೆ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ನೆನ್ನೆ ದಿವಸ ದಿನಗೂಲಿ ನೌಕರರ ಮೆರವಣಿಗೆಯಿಂದ ಬೆಂಗಳೂರಿನಲ್ಲಿ ಟ್ರಾಫಿಕ್ ಬಂದ್ ಆಗಿತ್ತು. ಇವತ್ತು ಬೆಳಿಗ್ಗೆ ನನಗೆ ಎಂಥ ಪರಿಸ್ಥಿತಿ ಬಂತು ಎಂದರೆ, ನಾನು ಬೆಳಿಗ್ಗೆ 5 ಗಂಟೆಗೆ ವಾಕಿಂಗ್ ಬಂದಾಗ ಪೋಲೀಸ್‌ನವರು ನನ್ನನ್ನು ಹಿಡಿದುಕೊಳ್ಳುವುದಕ್ಕೆ ಬಂದರು. ದಿನಗೂಲಿ ನೌಕರರು ಮುತ್ತಿಗೆ ಹಾಕುತ್ತಾರೆಂದು ವಿಧಾನ ಸೌಧದ ಸುತ್ತಲು ಪೋಲೀಸ್ ಬ್ಯಾರಿಕೇಡ್ ಹಾಕಿರುವುದರಿಂದ ಇಲ್ಲಿ ಬಿಗಿಯಾದಂತಹ ಪರಿಸ್ಥಿತಿ ಉಂಟಾಗಿದೆ. ವಿಧಾನಸೌಧದ ಸುತ್ತಲು ಇಂಥ ಒಂದು ಪರಿಸ್ಥಿತಿ ಮೂರು ದಿನಗಳಿಂದಲೂ ನಿರ್ಮಾಣವಾಗಿದೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ? ದಿನಗೂಲಿ ನೌಕರರ ಸಮಸ್ಯೆ ಏನು? ಅವರ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೋಸ್ಕರ ಅವರ ಜೊತೆ ಮಾತುಕತೆ ನಡೆಯುತ್ತಿದೆಯೇ? ಏಕೆಂದರೆ, ದಿನಗೂಲಿ ನೌಕರರ ಮಹಾ ಮಂಡಲದವರು ಈ ಹೋರಾಟ ಮಾಡುತ್ತಿದ್ದಾರೆ, ಇದರಲ್ಲಿ ಅಂಗನವಾಡಿ ಮತ್ತು ಪಂಚಾಯತ್ ನೌಕರರು ಹಾಗೆಯೇ ಬೇರೆ ಬೇರೆ ಇಲಾಖೆಯ ನೌಕರೆಲ್ಲರೂ ಇದ್ದಾರೆ. ಸಾವಿರಾರು ನೌಕರರು ಎರಡು ದಿವಸದಿಂದಬೆಂಗಳೂರಿನಲ್ಲಿ ಪ್ರತಿಭಟನೆ ಮಾಡುತ್ತಿದ್ದಾರೆ. ಇವತ್ತು ವಿಧಾನ ಸೌಧದ ಸುತ್ತಲು ಬಿಗಿಯಾದದಂತಹ ವಾತಾವರಣ ಇದೆ ಮತ್ತು ಬಂದೋಬಸ್ತು ಮಾಡಲಾಗಿದೆ. ಇವರ ಸಮಸ್ಯೆಗೆ ಪರಿಹಾರ ಕೈಗೊಳ್ಳಲು ಕ್ರಮ ತೆಗೆದುಕೊಳ್ಳಲಾಗಿದೆಯೆ? ಅಥವಾ ಇವರ ಜೊತೆ ಮಾತುಕತೆ ಮಾಡಲಾಗಿದೆಯೇ? ಇವರ ಸಮಸ್ಯೆಯನ್ನು ಪರಿಹಾರ ಮಾಡತಕ್ಕಂಥ ನಿಟ್ಟಿನಲ್ಲಿ ಸರ್ಕಾರ ಏನಾದರೂ ಮಾಡುತ್ತಿದೆಯೇ ಎಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ವಾಟಾಳ್ ನಾಗರಾಜ್ : ದಿನಗೂಲಿ ನೌಕರರು ಸರ್ಕಾರಕ್ಕೆ ಅನೇಕ ಬಾರಿ ಮನವಿಯನ್ನು ಸಲ್ಲಿಸಿದ್ದಾರೆ. ಪ್ರತಿ ವರ್ಷ ಬಹಳ ದೊಡ್ಡ ಪ್ರಮಾಣದಲ್ಲಿ ಸಾವಿರಾರು ಜನರು ಇಲ್ಲಿ ಸತ್ಯಾಗ್ರಹ ಮತ್ತು ಮೆರವಣಿಗೆ ಮಾಡುತ್ತಿದ್ದಾರೆ. ಇದನ್ನು ಬೇರೆ ಬೇರೆ ಜಿಲ್ಲೆಯಲ್ಲಿಯೂ ಕೂಡ ಮಾಡಿದ್ದಾರೆ. ಮನವಿಯನ್ನು ಕೊಡುವಾಗ ಅನೇಕ ಸಾರಿ ಮುಖ್ಯ ಮಂತ್ರಿಗಳನ್ನು ಭೇಟಿ ಮಾಡಿದ್ದಾರೆ. ಆದರೆ, ಇವರ ಸಮಸ್ಯೆ ಬಗ್ಗೆ ಏನು ಮಾಡಬೇಕೆಂದು ಸರ್ಕಾರ ಇದುವರೆಗೂ ಪ್ರಾಮಾಣಿಕವಾಗಿ ಚಿಂತನೆ ಮಾಡಿಲ್ಲ. ಆದ್ದರಿಂದ ಇವತ್ತು ದಿನಗೂಲಿ ನೌಕರರಿಗೆ ಮುಂದೆ ಏನು ಮಾಡುತ್ತೇವೆ ಎಂಬ ವಿಚಾರವನ್ನು ಈ ಸದನದ ಮುಂದೆ ಮಾನ್ಯ ಮುಖ್ಯಮಂತ್ರಿಗಳು ತಿಳಿಸಬೇಕೆಂದು ನನ್ನ ಮನವಿಯಾಗಿದೆ. ಎರಡನೆಯದಾಗಿ ಮಾನ್ಯ ಶ್ರೀ ರಾಮರೆಡ್ಡಿಯವರು ಹೇಳಿದ ಹಾಗೆ ವಿಧಾನಸೌಧದ ಸುತ್ತಲು ತುರ್ತು ಪರಿಸ್ಥಿತಿ ನಿರ್ಮಾಣ ಆದಂತಹ ರೀತಿಯಾಗಿದೆ. ವಿಧಾನ ಸೌಧದ ಒಳಗಡೆ ಶಾಸಕರು ಬರಬೇಕಾದರೆ ನಾಲ್ಕು ಕಡೆಯಿಂದ ಪೋಲೀಸ್ ಸರ್ಪಕಾವಲು ಹಾಕಿದ್ದಾರೆ. ಇಷ್ಟೆಲ್ಲಾ ಬೇಕಾಗಿತ್ತೆ? ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ತಿಳಿಸಬೇಕೆಂದು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.